ಕೈ ಹಿಡಿದು ಒಳಗ ಕರಕೊಂಡು ಹೋಗ್ಲೇನು?' ಎಂದು ಕೇಳಿದೆ. ಅವ ಮುಖ ಕೆಳಗೆ ಹಾಕಿದ. ಆಗ ಆ ಊರ ಹಿರಿಯನೊಬ್ಬ 'ಅವನಿಗೆಲ್ಲಿ ದಾರಿ ಅದಃಪಾ, ಇನ್ನ ಅವ ಮನೀನೆ ಹೊಕ್ಕಿಲ್ಲ' ಎಂದ. ವಿಚಿತ್ರ! ವಿಚಾರಿಸಿದಾಗ ತಿಳಿದ ಸಂಗತಿ ಏನೆಂದರೆ, ಗೆಳೆಯನ ತಂದೆ ತನ್ನ ಮದುವೆಯಾದ ಹೊಸತರಲ್ಲಿ ಮನೆ ಹೊಕ್ಕುಕೊಳ್ಳಲು ಎರಡು ತೊಲೆ ಬಂಗಾರಕ್ಕೆ ಡಿಮಾಂಡು ಇಟ್ಟಿದ್ದನಂತೆ. ಮಾವನಿಗೆ ಅಳಿಯನ ಬೇಡಿಕೆ ಪೂರೈಸಲಾಗಲಿಲ್ಲವಂತೆ. ಕಾರಣ ಮನೆ ಹೊಕ್ಕೊಳ್ಳಲಿಲ್ಲ. ಮನೆ ಹೊಕ್ಕುಕೊಳ್ಳದ ಅಳಿಯನಿಗೆ ಪ್ರವೇಶ ನಿಷಿದ್ಧವಂತೆ. ಹೆಣ ಎತ್ತಿದಾಗ ಸ್ಮಶಾನಕ್ಕೆ ಹೋಗಿ ಆಯಿಗೆ ಮೂರು ಹಿಡಿ ಮಣ್ಣಾಕಿ ಬೀಗರ ಮನೆಗೆ ಹೋಗದೆ ನೇರ ಊರಿಗೆ ಬಂದನು. ಬರುವಾಗ ಯುವಕನೊಬ್ಬ, "ಈಗರೇನಾತು ಕಾಕಾ, ಬಂಗಾರ ಕೊಡಸತೇವಿ, ಕುಸ್ತಿ ಹಸನಕಟ್ಟ ಒಗೀತಿ ಏನು?" ಎಂದಾಗ ಟ್ಯಾಕ್ಸಿ ತುಂಬ ನಗೆ ಬಾಂಬು ಸ್ಫೋಟವಾಯಿತು. ಇಂಥ ಘಟನೆಗಳು ಅಲ್ಲಿ ಸರ್ವೆಸಾಮಾನ್ಯ.

ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಯ ಕೆಲವು ಕಡೆ ಈ ಅಳಿಯತನದ ಆಚರಣೆ ಇನ್ನೂ ಭಿನ್ನವಾಗಿದೆ. ಇದು 60–70ರ ದಶಕದ ಮಾತು. ಈಗಿನಂತೆ ಮದುವೆಯಾಗುವ ಹುಡುಗ–ಹುಡುಗಿಯರು ಒಬ್ಬರನ್ನೊಬ್ಬರು ನೋಡಿ, ಪರಸ್ಪರ ಮಾತನಾಡಿ, ವಿಚಾರಗಳನ್ನು ಹಂಚಿಕೊಂಡು ಮೆಚ್ಚುಗೆ ತಿಳಿಸುವ ಕಾಲ ಅದಾಗಿರಲಿಲ್ಲ. ಗಂಡಿನ ಕಡೆಯ ಐದು ಜನ ಹೆಣ್ಣಿನ ಮನೆಗೆ ಹೋಗಿ ಹಣ್ಣು ಇಟ್ಟು, ಪಡಸಾಲೆಯಲ್ಲಿನ ಕಾಲಿನ ನಿಟ್ಟು, ಕೊಟ್ಟಿಗೆಯಲ್ಲಿನ ಎತ್ತು ಮತ್ತು ಇತರ ದನಕರುಗಳು, ಹಿತ್ತಲಲ್ಲಿಯ ಕಣಿಕೆ, ಹೊಟ್ಟಿನ ಬಣವೆಗಳು, ವಧುವಿನ ಕಡೆಯವರು ಮಾಡುವ ಆದರಾತಿಥ್ಯ ಮನಸ್ಸಿಗೆ ಹಿಡಿಸಿದರೆ ಮುಗಿಯಿತು, ಸಂಬಂಧ ಪಕ್ಕಾ ಆದಂತೆ. ಮುಂದೆ ವರ–ವಧುವಿನ ಮುಖ ದರ್ಶನ ಮದುವೆಯ ಹಂದರದಲ್ಲೆ. ಮದುವೆ ಎಂದರೆ ಏಳೇಳು ಜನ್ಮದ ಸಂಬಂಧ, ಇಂತಿಂಥವರು ಗಂಡ ಹೆಂಡಿರಾಗಬೇಕೆಂದು ದೇವರೆ ನಿಶ್ಚಯಿಸಿರುತ್ತಾನೆ. ಲೌಕಿಕ ವಿವಾಹ ನೆಪಕ್ಕೆ ಮಾತ್ರ ಎಂಬ 'ದೈವಿ ಸಿದ್ಧಾಂತ'ದಲ್ಲಿ ಅಚಲ ನಂಬುಗೆ ಇದ್ದ ಕಾಲವದು. ಮದುವೆಗಳು ಸಾಮಾನ್ಯವಾಗಿ ರೈತರ ಸುಗ್ಗಿ ಮುಗಿದ ಅನಂತರವೇ, ಅಂದರೆ ಎಪ್ರಿಲ್–ಮೇ ತಿಂಗಳಲ್ಲಿ ಜರುಗುತ್ತಿದ್ದವು. ಒಂದೆರಡು ಸಲ ಸೊಸೆ ಗಂಡನ ಮನೆಗೆ ನಡೆಯಲು ಬರುವಷ್ಟರಲ್ಲಿ ನಾಗಪಂಚಮಿ, ಸೋನೆ ಮುಂತಾದ ಕಾರಣಗಳಿಂದ ಸೊಸೆ ತವರು ಮನೆಗೆ ತಿಂಗಳಾನುಗಟ್ಟಲೆ ಹೋಗುತ್ತಿದ್ದಳು.



ನಾಗಪಂಚಮಿ ಅನಂತರ ಬರುವ ಕೆರೆಯಂಬಲಿಯಂದು (ಕೆರೆಕಟ್ಟಂಬಲಿ) ಅಳಿಯ ಮೊದಲ ಸಲ ಮಾವನ ಮನೆಗೆ ಹೋಗುವುದು ಬೆಳೆದು ಬಂದ ಪದ್ಧತಿ. ಅಳಿಯನಿಗೆ ತಿಂಡಿ–ತೀರ್ಥ, ಊಟ, ಆತಿಥ್ಯ ಮುಂತಾದ ಉಪಚಾರವನ್ನು ವಿಶೇಷವಾಗಿ ಮಾಡುತ್ತಾರಾದರೂ ಬಟ್ಟೆ, ಬಂಗಾರದ ರೂಪದಲ್ಲಿ ಕಾಣಿಕೆ ನೀಡುವ ಪದ್ಧತಿ ಇಲ್ಲ. ಬದಲಾಗಿ ಅವನಿಗೆ ಅಳಿಯ, ಸೊಸೆಯರಾಗುವವರು ಅವನ ಅಂಗಿ, ರುಮಾಲು, ವಾಚು, ಚಪ್ಪಲಿಗಳನ್ನು ಮುಚ್ಚಿಟ್ಟು ನೂರಾರು ರೂಪಾಯಿಗಳ ಚಾಜು ಇಸಿದುಕೊಂಡು ಅದರಿಂದ ಫಲಾಹಾರವನ್ನು ಖರೀದಿಸಿ ಓಣಿಯಲ್ಲಿ ಹಂಚುವುದರ ಮೂಲಕ ಅಳಿಯ ಬಂದ ಸಮಾಚಾರವನ್ನು ಊರತುಂಬ ಪ್ರಸಾರ ಮಾಡುವರು.

ನಮ್ಮೂರಿನ ಮೂಲಿಮನಿ ಚನಬಸಪ್ಪನ ಮಗಳನ್ನು ಹುಬ್ಬಳ್ಳಿ ಹತ್ತಿರದ ಒಂದು ಹಳ್ಳಿಗೆ ಕೊಟ್ಟಿದ್ದರು. ಅಳಿಯ ಕೆರೆಯಂಬಲಿ ದಿನ ಮಸರಾಯಿ ಧೋತ್ರ, ಟೆರಿಕಾಟ್ ಅಂಗಿ, ತಲೆಯ ಮೇಲೆ ರೇಶಿಮೆ ಪಟಗ, ಕಾಲಾಗ ಜರಕಿ ಜೋಡು, ಕೊಳ್ಳಾಗ ಚೈನು, ಬಳ್ಳಾಗ ಉಂಗುರ, ಮುಂಗೈಗೆ ವಾಚು ಕಟ್ಟಿಕೊಂಡು, ಎರಡೂ ಕೈಯಲ್ಲಿ ಎರಡು ಪಂಚಮಿಯ ವಿಶೇಷವಾದ ಉಂಡಿ, ಚಕ್ಕುಲಿ, ಅರಳು ಹಣ್ಣು ಹಂಪಲ ತುಂಬಿದ ಚೀಲಾ ಹಿಡಿದುಕೊಂಡು ಬಸ್ಸು ಇಳಿದ. ಸದಾ ಬಸ್‌ಸ್ಟ್ಯಾಂಡಿನಲ್ಲೇ ಝಂಡಾ ಊರುತ್ತಿದ್ದ